

# ಅವನು ಕಾದಿರಿಸಿದ ಸೀಟು

ಝೋಟೂನಿನಿಂದ ಬಸ್ಸು ಹೊರಟ ಕ್ಷಣದಲ್ಲೇ ಹೆಲ್ವಾನಿನ ಒಂದು ಮನೆಯಿಂದ ಖಾಸಗಿ ಕಾರೊಂದು ಹೊರಟಿತು. ಎರಡೂ ಬೇರೆ ಬೇರೆ ವೇಗಗಳಲ್ಲಿ ಸಾಗುತ್ತಿದ್ದವು ವೇಗ ಹೆಚ್ಚಿಸಿಕೊಳ್ಳುತ್ತಾ, ನಿಧಾನಗೊಳ್ಳುತ್ತಾ, ಬಹುಶಃ ಟ್ರಾಫಿಕ್ಕಿಗೆ ಅನುಗುಣವಾಗಿ ಒಂದು ನಿಮಿಷ ಅಥವಾ ಅದಕ್ಕೂ ಹೆಚ್ಚು ಹೊತ್ತು ನಿಲ್ಲುತ್ತಾ.

ಅವರೆಡೂ ಒಂದೇ ಸಮಯಕ್ಕೆ ಸ್ಟೇಷನ್ ಸ್ಕ್ವೇರನ್ನು ತಲಪಿದ್ದಷ್ಟೇ ಅಲ್ಲ, ಒಂದು ಸಣ್ಣ ಅಪಘಾತವೂ ಆಗಿ ಬಸ್ಸಿನ ಒಂದು ಹೆಡ್‌ಲೈಟು ಒಡೆದುಹೋಯಿತು, ಕಾರಿನ ಮುಂಭಾಗದಲ್ಲಿ ಗೀಚುಗೆರೆಗಳಾದವು.

ಅಲ್ಲಿಯೇ ಹೋಗುತ್ತಿದ್ದ ಒಬ್ಬ ಎರಡೂ ವಾಹನಗಳ ಮಧ್ಯೆ ಅಪ್ಪಚ್ಚಿಯಾಗಿ ಸತ್ತುಹೋದ. ಅವನು ಉತ್ತರ ಈಜಿಪ್ಟಿಗೆ ಹೋಗುವ ರೈಲಿನಲ್ಲಿ ಒಂದು ಸೀಟು ಕಾದಿರಿಸುವುದಕ್ಕಾಗಿ ಆ ಸ್ಕ್ವೇರನ್ನು ದಾಟುತ್ತಿದ್ದವನು.

# ಪತ್ತೇದಾರ

ನಾನು ಇನ್ನೇನು ಮಲಗಬೇಕು, ಅದಾಗ ಬಾಗಿಲು ಸದ್ದಾಯಿತು. ಪೀಪ್‌ಹೋಲನ್ನು ತೆರೆದು ನೋಡಿದಾಗ ನನ್ನ ದೃಷ್ಟಿಗೆ ಅಡ್ಡ ಬರುವಂತೆ ಒಂದು ಮನುಷ್ಯಾಕಾರ ಕಾಣಿಸಿತು.

‘ಪೋಲಿಸ್ ಸ್ಟೇಷನ್ ಡಿಟೆಕ್ಟಿವ್’ ಎಂದ ಅವನು.

ಕೈಯನ್ನು ಮುಂದೆ ಚಾಚಿ ಯಾವುದೋ ಮುಖ್ಯ ವಿಷಯಕ್ಕೆ ಸಂಬಂಧಿಸಿದಂತೆ ತನ್ನ ಜೊತೆ ಬರಬೇಕೆನ್ನುವ ಒಂದು ನೋಟೀಸನ್ನು ಕೊಟ್ಟ.

ಅವನು ನಮ್ಮ ಬಡಾವಣೆಯಲ್ಲಿ ಯಾರದಾದರೂ ಮನೆಗೆ ಹೋಗಿ ಸಮನ್ಸ್ ಜಾರಿ ಮಾಡುವುದು ತೀರ ಸಾಮಾನ್ಯ ಸಂಗತಿ. ಯಾವುದೇ ಸಮಯದಲ್ಲಾದರೂ ಯಾವುದೇ ಹಿಂಜರಿಕೆಯಿಲ್ಲದೆ ಮನೆಗಳಿಗೆ ಹೋಗುತ್ತಿದ್ದವನು. ಆದ್ದರಿಂದ ಅವನು ಹೇಳಿದಂತೆ ಕೇಳುವುದನ್ನು ಬಿಟ್ಟು ಬೇರೆ ದಾರಿ ಇರುತ್ತಿರಲಿಲ್ಲ. ಇವನ ಜೊತೆ ವಾದಿಸುವುದರಿಂದ ಪ್ರಯೋಜನವಿಲ್ಲ ಎಂದುಕೊಂಡ ನಾನು ಡ್ರೆಸ್ ಮಾಡಿಕೊಳ್ಳುವುದಕ್ಕಾಗಿ ಬೆಡ್‌ರೂಮಿಗೆ ಹೋದೆ.

ಆಮೇಲೆ ಒಂದೇ ಒಂದು ಮಾತಾಡದೆ ಅವನನ್ನು ಹಿಂಬಾಲಿಸಿದೆ.

ಕಿಟಕಿಗಳಲ್ಲಿ ತಮ್ಮ ಕಣ್ಣುಗಳಿಂದ ನಮ್ಮನ್ನು ನೋಡುತ್ತ ಗುಸುಗುಸು ಮಾತನಾಡುತ್ತಿದ್ದ ಜನರ ಮಬ್ಬುಮಬ್ಬಾದ ಆಕೃತಿಗಳು ಕಾಣಿಸಿದವು.

ಅವರು ಪರಸ್ಪರ ಪಿಸುಗುಟ್ಟುತ್ತಿದ್ದಾರೆಂದು ನನಗೆ ಗೊತ್ತು. ಯಾಕೆಂದರೆ ನಾನೂ ನನಗಿಂತ ಮೊದಲು ಆ ಪತ್ತೇದಾರನ ಹಿಂದೆ ಹೋಗುತ್ತಿದ್ದವರನ್ನು ನೋಡಿ ಅವರ ಹಾಗೆಯೇ ಪಿಸುಗುಟ್ಟಿದವನು.

